# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1170 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು. |
| ಉತ್ತರಿಸುವ ದಿನಾಂಕ | : | 15-12-2023. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ/ತುಂತುರು ನೀರಾವರಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೇ: ಹಾಗಿದ್ದಲ್ಲಿ ಈ ಯೋಜನೆಯ ರೂಪು ರೇಷೆಗಳು ಯಾವುವು ಮತ್ತು ಈ ಯೋಜನೆಯಡಿ ರೈತರಿಗೆ ರಾಜ್ಯ-ಕೇಂದ್ರ ಸರ್ಕಾರಗಳಿಂದ ದೊರೆಯುವ ಆರ್ಥಿಕ ನೆರವು ಮತ್ತು ಸೌಲಭ್ಯಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ನೆರವಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಪ್ರತಿ ಹನಿಗೆ ಅಧಿಕ ಬೆಳೆ – ಸೂಕ್ಷ್ಮ ನೀರಾವರಿ ಯೋಜನೆಯಡಿ ಹನಿ/ತುಂತುರು ನೀರಾವರಿ ಕಾರ್ಯಕ್ರಮವನ್ನು ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>**ಈ ಯೋಜನೆಯ ರೂಪುರೇಷೆಗಳು ಕಳಕಂಡಂತಿವೆ**;<br>ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಒಬ್ಬ **ರೈತ** ಫಲಾನುಭವಿಗೆ ಗರಿಷ್ಟ 5 ಹೆಕ್ಟೇರ್ ವರೆಗೂ ಹನಿ / ತುಂತುರು ನೀರಾವರಿ ಘಟಕ ಅಳವಡಿಕೆಗೆ ಸಹಾಯಧನವನ್ನು ಒದಗಿಸಲು ಅವಕಾಶವಿರುತ್ತದೆ.<br><br>ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.55 ರಂತೆ ಹಾಗೂ ಇತರೆ ವರ್ಗದ ರೈತರಿಗೆ ಶೇ.45ರಂತೆ ಸಹಾಯಧನವನ್ನು ನೀಡಬಹುದಾಗಿರುತ್ತದೆ.<br><br>ಈ ಯೋಜನೆಯ ಪಾಲುದಾರಿಕೆಯಲ್ಲಿ ಕೇಂದ್ರಪಾಲು 60% ಹಾಗೂ ರಾಜ್ಯಪಾಲು 40% ರಷ್ಟು ಇರುತ್ತದೆ.<br><br>ಸೂಕ್ಷ್ಮ ನೀರಾವರಿಯ ಪ್ರಾಮುಖ್ಯತೆಯನ್ನು ಹಾಗೂ ಅಗತ್ಯತೆಯನ್ನು ಅರಿತು ರೈತರ ಹಿತ ದೃಷ್ಟಿಯಿಂದ ರಾಜ್ಯ ಸರ್ಕಾರವು ತನ್ನ ಪಾಲನ್ನು ಹೆಚ್ಚಿಸಿದೆ.<br><br>ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಲ್ಲಿ ಮೊದಲ 2 ಹೆಕ್ಟೇರ್ ವರೆಗೂ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ರೈತರಿಗೆ ಶೇ.90ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ.75ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.<br><br>ಕೃಷಿ ಇಲಾಖೆಯಲ್ಲಿ ಹನಿ ನೀರಾವರಿ ಅಳವಡಿಕೆಗೆ ಮೊದಲ 2 ಹೆಕ್ಟೇರ್ ವರೆಗೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ. ತುಂತುರು ನೀರಾವರಿ ಅಳವಡಿಕೆಗೆ ಮೊದಲ 2 ಹೆಕ್ಟೇರ್ ವರೆಗೂ ಎಲ್ಲಾ ವರ್ಗದ ರೈತರಿಗೂ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಲ್ಲಿ ತುಂತುರು/ಹನಿ ನೀರಾವರಿ ಅಳವಡಿಸಲು ಎಲ್ಲಾ ವರ್ಗದ |

| | | |
|---|---|---|
| | | ರೈತರಿಗೂ 2 ಹೆಕ್ಟೇರ್ ನಿಂದ 5 ಹೆಕ್ಟೇರ್ ವರೆಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಶೇ.45 ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ. |
| ಆ | ರಾಜ್ಯದಲ್ಲಿ ಕೃಷಿ ಸಿಂಚಾಯಿ ಯೋಜನೆಯನ್ನು ಅನುಷ್ಠಾನಗೊಳಿಸಲು ಗುರುತಿಸಿರುವ ಸಂಸ್ಥೆಗಳು ಯಾವುವು ಮತ್ತು ಅವುಗಳು ನಿರ್ವಹಿಸುವ ಕಾರ್ಯ ಮತ್ತು ಕರ್ತವ್ಯಗಳು ಯಾವುವು: ಈ ಸಂಸ್ಥೆಗಳಿಗೆ ರಾಜ್ಯ-ಕೇಂದ್ರಗಳಿಂದ ದೊರೆಯುವ ಸೌಲಭ್ಯಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೃಷಿ ಸಿಂಚಾಯಿ ಯೋಜನೆಯನ್ನು ಅನುಷ್ಠಾನಗೊಳಿಸಲು ತೋಟಗಾರಿಕೆ, ಕೃಷಿ, ರೇಷ್ಮೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳಲ್ಲಿ ಹನೀ/ತುಂತುರು ನೀರಾವರಿ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ. ಜಲಾನಯನ ಅಭಿವೃದ್ಧಿ ಇಲಾಖೆಯು ಅಂತರ್ಜಲ ಮಟ್ಟವನ್ನು ವೃದ್ಧಿಗೊಳಿಸಲು ನೀರು ಶೇಖರಣಾ ಘಟಕಗಳಾದ ಚೆಕ್ ಡ್ಯಾಂ, ವೆಂಟೆಂಡ್ ಡ್ಯಾಂ, ನಾಲಾಬಂಡ್ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸುತ್ತಿದೆ.<br><br>ಈ ಅನುಷ್ಠಾನ ಇಲಾಖೆಗಳ ಕರ್ವ್ಯವ್ಯವೇನೆಂದರೆ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಅನುಮೋದಿತ ಸಂಸ್ಥೆಗಳಿಂದ ಅಳವಡಿಸಿಕೊಡುವುದಾಗಿರುತ್ತದೆ. ರೈತರಿಗೆ ನಿಯಮಾನುಸಾರ ಸಹಾಯಧನವನ್ನು ಅನುಷ್ಠಾನ ಇಲಾಖೆಗಳು ವಿತರಿಸುತ್ತವೆ.<br><br>ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇ.60 ರಷ್ಟು ಹಾಗೂ ರಾಜ್ಯದಿಂದ ಶೇ.40 ಷ್ಟು ಪಾಲುದಾರಿಕೆ ಇರುತ್ತದೆ. ಆದರೆ ರಾಜ್ಯದ ರೈತರ ಹಿತದೃಷ್ಟಿಯಿಂದ Topup ಸಹಾಯಧನ ನೀಡಲಾಗುತ್ತಿದ್ದು ಮೇಲಿನ (ಅ) ದಲ್ಲಿ ವಿವರಿಸಲಾಗಿದೆ. |
| ಇ | ರಾಜ್ಯದಲ್ಲಿ ಈ ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ದೊರೆತಿರುವ ಆರ್ಥಿಕ ನೆರವು ಎಷ್ಟು ಮತ್ತು ಈ ನೆರವನ್ನು ರೈತರಿಗೆ ಯಾವ ರೀತಿ ಪಾವತಿಸಲಾಗಿದೆ: (ಪೂರ್ಣ ಮಾಹಿತಿ ನೀಡುವುದು) | ಈ ಯೋಜನೆಯಡಿ 2022-23ನೇ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಿಗೆ ಕೇಂದ್ರ ಪಾಲು ರೂ.39547.80 ಲಕ್ಷ ಮತ್ತು ರಾಜ್ಯಪಾಲು ರೂ.48099.89 ಲಕ್ಷಗಳು ಸೇರಿದಂತೆ ಒಟ್ಟು ರೂ. 87647.70 ಲಕ್ಷಗಳ ಆರ್ಥಿಕ ನೆರವು ದೊರೆತಿರುತ್ತದೆ.<br><br>**ಈ ನೆರವನ್ನು ರೈತರಿಗೆ ಈ ಕೆಳಕಂಡಂತೆ ಪಾವತಿಸಲಾಗಿರುತ್ತದೆ;**<br><br>1. ಫಲಾನುಭವಿಯು ಸೂಕ್ಷ್ಮ ನೀರಾವರಿ ಘಟಕ ಅಳವಡಿಕೆಗೆ ತಗಲುವ ಸಂಪೂರ್ಣ ವೆಚ್ಚವನ್ನು ಅಳವಡಿಸುವ ಸೂಕ್ಷ್ಮ ನೀರಾವರಿ ಕಂಪನಿಗೆ ಪಾವತಿ ಮಾಡಿದರೆ, ಸಹಾಯಧನವನ್ನು ಡಿಬಿಟಿ ಮೂಲಕ ಫಲಾನುಭವಿಯ ಆಧಾರ್ ಲಿಂಕ್ ಮಾಡಿದ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿರುತ್ತದೆ.<br><br>2. ಫಲಾನುಭವಿಯು ಕೇವಲ ರೈತರ ವಂತಿಕೆಯನ್ನು ಮಾತ್ರ ಪಾವತಿಸಿದರೆ, ಫಲಾನುಭವಿಯಿಂದ ನಿರಾಪೇಕ್ಷಣ ಪತ್ರ (NOC) ಪಡೆದು ಕಂಪನಿಯ ಬ್ಯಾಂಕ್ ಖಾತೆಗೆ ಸಹಾಯಧನದ ಮೊತ್ತವನ್ನು ಜಮೆ ಮಾಡಲಾಗಿರುತ್ತದೆ. |

NO:HORTI 513 HGM 2023

S. S. Mallikarjun

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು